**2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ,**

**ಎಸ್.ಸಿ.ನಂಃ-225/2023**

ಪಿ.ಡಬ್ಲ್ಯೂಃ- 11
ಸಿ.ಡಬ್ಲ್ಯೂಃ- 13

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಅವಿನಾಶ್ |
| ತಂದೆಯ ಹೆಸರುಃ | : | ಸತೀಶ |
| ವಯಸ್ಸುಃ | : | 40 ವರ್ಷ |
| ವೃತ್ತಿಃ | : | ವ್ಯವಸಾಯ |
| ವಾಸಃ | : | ಕಲ್ಲಹಳ್ಳಿ ಗ್ರಾಮ. |

**ದಿನಾಂಕಃ 16-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿತ ಗೊತ್ತು. ಮೃತ ಅಂಬಿಕಾ ಗೊತ್ತು ಆಕೆ ಕಲ್ಲಹಳ್ಳಿ ಗ್ರಾಮದವಳು. ಚಾಸಾ-12 ಕಾವೇರಮ್ಮ ರವರಿಗೆ ಇಬ್ಬರು ಹೆಣ್ಣುಮಕ್ಕಳು. ಅಂಬಿಕಾ ರವರನ್ನು ಆರೋಪಿ ಚಂದ್ರಮೌಳಿಗೆ ಸುಮಾರು 14 ವರ್ಷದ ಹಿಂದೆ ಕೊಟ್ಟು ವಿವಾಹ ಮಾಡಲಾಗಿರುತ್ತದೆ. ಅವರ ವಿವಾಹ ಸಂಬಂಧದಿಂದ ಅವರಿಗೆ ಇಬ್ಬರು ಮಕ್ಕಳು ಇರುತ್ತಾರೆ. 2023 ರಲ್ಲಿ ಅಂಬಿಕಾರವರ ಗಂಡನಾದ ಆರೋಪಿತ ಚಂದ್ರಮೌಳಿ ಆಕೆಯನ್ನು ಹಾಸನದಿಂದ ಅಂಕನಹಳ್ಳಿ ಗ್ರಾಮದ ನೀಲಗಿರಿ ಫಾರೆಸ್ಟಿಗೆ ಕರೆದುಕೊಂಡು ಹೋಗಿ ಆಕೆಯನ್ನು ಕೊಲೆ ಮಾಡಿರುತ್ತಾನೆ. ವಿಷಯ ತಿಳಿದ ನಾನು ಸ್ಥಳಕ್ಕೆ ಹೋಗಿ

ನೋಡಿರುತ್ತೇನೆ. ಮೃತದೇಹದ ಮುಖದ ಮೇಲೆ ಗಾಯಗಳು ಕಂಡು ಬಂದವು. ಮೊದಲಿನಿಂದಲೂ ಆರೋಪಿ ಚಂದ್ರಮೌಳಿ ಆತನ ಪತ್ನಿ ಅಂಬಿಕಾ ರವರ ಜೊತೆ ಜಗಳ ಆಡುತ್ತಿದ್ದ. ಆರೋಪಿತ ಚಂದ್ರಮೌಳಿ ಆತನ ಪತ್ನಿ ಅಂಬಿಕಾ ರವರ ಬಳಿ ಹಣ ಕೇಳಿ ಆಕೆಯ ಜೊತೆ ಯಾವಾಗಲೂ ಜಗಳ ಮಾಡುತ್ತಿದ್ದ. ನಾವು ಸಾಕಷ್ಟು ಬಾರಿ ಆರೋಪಿತನಿಗೆ ಈ ಬಗ್ಗೆ ಬುದ್ದಿವಾದ ಹೇಳಿದರೂ ಸಹ ಆತ ಸರಿ ಹೋಗಲಿಲ್ಲ. ಹಾಸನದ ಗಾರ್ಮೆಂಟಿಗೆ ಕೆಲಸಕ್ಕೆ ಹೋಗುತ್ತಿದ್ದ ಅಂಬಿಕಾ ರವರನ್ನು ಲೋನ್ ಕೊಡಿಸುವಂತೆ ಹೇಳಿ ಆರೋಪಿತ ಅಂಕನಹಳ್ಳಿ ಗ್ರಾಮದ ನೀಲಗಿರಿ ಫಾರೆಸ್ಟಿಗೆ ಕರೆತಂದು ಆಕೆಯ ತಲೆಯ ಮೇಲೆ ಕಲ್ಲು ಎತ್ತಿ ಹಾಕಿ ಆಕೆಯನ್ನು ಕೊಲೆ ಮಾಡಿರುತ್ತಾನೆ. ಘಟನೆಯ ಸಂಬಂಧ ನಾನು ಪೊಲೀಸರಲ್ಲಿ ನನ್ನ ಹೇಳಿಕೆ ನೀಡಿರುತ್ತೇನೆ. ನಿಪಿ-9 ರಿಂದ 12 ಫೋಟೋಗಳು ನೀಲಗಿರಿ ಫಾರೆಸ್ಟಿನಲ್ಲಿ ಕೊಲೆಯಾಗಿದ್ದ ಅಂಬಿಕಾರವರ ಮೃತದೇಹದ ಫೋಟೋಗಳು ಆಗಿರುತ್ತವೆ.

**ಪಾಟೀ ಸವಾಲು: ಆರೋಪಿ ಪರ ಡಿಫೆನ್ಸ್ ಕೌನ್ಸಿಲ್ ರವರಿಂದ**

2. ಮೃತ ಅಂಬಿಕಾ ನಮ್ಮ ಪಕ್ಕದ ಮನೆಯ ವಾಸಿ ಆದರೆ ನನ್ನ ಸಂಬಂಧಿಕರಲ್ಲ. ಅಂಬಿಕಾ ವಿವಾಹವಾದ ಕಾಲದಿಂದ ಆಕೆಯ ಗಂಡನ ಮನೆಯಲ್ಲಿ ವಾಸ ಎಂದರೆ ಸರಿ. ಆರೋಪಿ ಹಾಗೂ ಆತನ ಪತ್ನಿಯ ನಡುವೆ ಅವರ ಮನೆಯಲ್ಲಿ ದಿನನಿತ್ಯ ಏನು ನಡೆಯುತ್ತಿತ್ತು ಎಂಬುದು ನನಗೆ ತಿಳಿದಿಲ್ಲ. ಸಾಕ್ಷಿದಾರರು ಮುಂದುವರಿದು ಅಂಬಿಕಾ ಊರಿಗೆ ಬರುತ್ತಿದ್ದ ಕಾಲದಲ್ಲೆಲ್ಲಾ ಆಕೆ ಹಾಗೂ ಆಕೆಯ ಗಂಡನ ನಡುವೆ ನಮ್ಮ ಊರಿನಲ್ಲಿಯೂ ಸಹ ಜಗಳ ಆಗುತ್ತಿತ್ತು ಎಂದು ಉತ್ತರಿಸಿರುತ್ತಾರೆ. ಆರೋಪಿತನಿಗೆ ಊರಿನಲ್ಲಿ ಯಾವಾಗ ತಿಳುವಳಿಕೆ ಹೇಳಿರುತ್ತೀರಿ ಎಂಬ ವಕೀಲರ ಪ್ರಶ್ನೆಗೆ ಸಾಕ್ಷಿದಾರರು

ನಾವು ಸುಮಾರು 10-15 ಸಾರಿ ಆರೋಪಿತನಿಗೆ ಅಂಬಿಕಾ ರವರ ಜೊತೆ ಗಲಾಟೆ ಮಾಡದಂತೆ ತಿಳುವಳಿಕೆ ಹೇಳಿರುತ್ತೇವೆ ಎಂದು ಉತ್ತರಿಸಿರುತ್ತಾರೆ. ಆರೋಪಿತನಿಗೆ 10-12 ಬಾರಿ ತಿಳುವಳಿಕೆ ನೀಡಿರುತ್ತೇವೆ ಎಂದು ನಾನು ಪೊಲೀಸರಲ್ಲಿ ನೀಡಿರುವ ನನ್ನ ಹೇಳಿಕೆಯಲ್ಲಿ ತಿಳಿಸಿರುತ್ತೇನೆ. ಈ ಬಗ್ಗೆ ಪೊಲೀಸರಲ್ಲಿ ನೀಡಿರುವ ನನ್ನ ಹೇಳಿಕೆಯಲ್ಲಿ ಕಂಡು ಬರುವುದಿಲ್ಲ ಎಂದರೆ ಸರಿ. ನಾನು ಆರೋಪಿತನಿಗೆ ತಿಳುವಳಿಕೆ ನೀಡಿದ್ದೇ ಆಗಿದ್ದಲ್ಲಿ ಈ ಬಗ್ಗೆ ಪೊಲೀಸರಲ್ಲಿ ನೀಡಿರುವ ಹೇಳಿಕೆಯಲ್ಲಿ ತಿಳಿಸುತ್ತಿದ್ದು ನಾನು ಆರೋಪಿತನಿಗೆ ಯಾವುದೇ ತಿಳುವಳಿಕೆ ನೀಡದ ಕಾರಣ ಈ ಬಗ್ಗೆ ಪೋಲೀಸರಲ್ಲಿ ನೀಡಿರುವ ಹೇಳಿಕೆಯಲ್ಲಿ ತಿಳಿಸಿಲ್ಲ ಎಂದರೆ ಸರಿಯಲ್ಲ. ಅಂಬಿಕಾ ಮೃತಪಡುವ ದಿನ ಆಕೆ ನಮ್ಮ ಊರಿನಿಂದಲೇ ಹೋಗಿದ್ದು ಊರಿನಲ್ಲಿ ಸಹ ಆರೋಪಿತ ಹಾಗೂ ಅಂಬಿಕಾ ರವರ ನಡುವೆ ಗಲಾಟೆ ಆಗಿದ್ದ ಕಾರಣದಿಂದ ಯಾವ ಕಾರಣಕ್ಕಾಗಿ ಅಂಬಿಕಾ ರವರ ಕೊಲೆ ಅಯಿತು ಎಂದು ನಾನು ಸಾಕ್ಷ್ಯ ನುಡಿದಿರುತ್ತೇನೆ. ಅಂಬಿಕಾ ಮೃತಪಡುವ ದಿನ ಆರೋಪಿತ ಕಲ್ಲಹಳ್ಳಿಗೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ಬೆಳಿಗ್ಗೆ 9.45-10.00 ಗಂಟೆ ಸಮಯಕ್ಕೆ ಮಾಹಿತಿ ಬಂದಿದ್ದು ಸ್ಥಳಕ್ಕೆ ಹೋಗಿರುತ್ತೇವೆ. ಸುಮಾರು ಒಂದು ಗಂಟೆಯ ಕಾಲ ನಾನು ಸ್ಥಳದಲ್ಲಿ ಇದ್ದೆ. ನಿಪಿ-9 ರಿಂದ 12 ಫೋಟೋಗಳಲ್ಲಿ ನನ್ನ ಇರುವಿಕೆ ಕಂಡು ಬರುವುದಿಲ್ಲ ಎಂದರೆ ಸರಿ. ಅಂಬಿಕಾ ರವರ ಕೊಲೆಯ ಬಗ್ಗೆ ತಿಳಿದು ಬಂದು ನಾನು ಸ್ಥಳಕ್ಕೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಘಟನೆ ನಡೆದ ಸ್ಥಳದಲ್ಲಿಯೇ ಪೊಲೀಸರು ನನ್ನ ಹೇಳಿಕೆ ಪಡೆದಿರುತ್ತಾರೆ. ಘಟನೆಯ ಸಂಬಂಧ ನಾನು ಪೊಲೀಸರಲ್ಲಿ ಯಾವುದೇ ಹೇಳಿಕೆ ನೀಡದಿದ್ದರೂ ಸಹ ಅಂಬಿಕಾ ರವರ ಪಕ್ಕದ ಮನೆಯ ವಾಸಿಯಾದ ಕಾರಣ ಪೊಲೀಸರ ಹೇಳಿಕೆ ಮೇರೆಗೆ ಸುಳ್ಳು ಸಾಕ್ಷ್ಯ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಂಬಿಕಾ ರವರ ಕೊಲೆಗೆ ಆರೋಪಿತ ಕಾರಣನಲ್ಲ ಎಂದರೆ ಸರಿಯಲ್ಲ. ಅಂಬಿಕಾ ರವರ ಸಾವಿಗೂ ಆರೋಪಿತನಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.